158th continued Session ಕ್ರಮ ಸಂ:-62

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ. ಅಬ್ದುಲ್ ಜಬ್ಬಾರ್ ಇವರ ಶೂನ್ಯ ವೇಳೆಯ ಪ್ರಸ್ತಾವನೆಗೆ ಉತ್ತರ.**

**ಸೂಚನೆ:**

ಶಾಲೆಗೆ ಮಕ್ಕಳನ್ನು ಕರೆದುಕೊಂಡು ಹೋಗುವ ವಾಹನಗಳನ್ನು ವಶಪಡಿಸಿ ಕೊಳ್ಳುತ್ತಿರುವ ಕುರಿತು.

ಸಾರಿಗೆ ಪ್ರಾಧಿಕಾರವು ಇತ್ತೀಚೆಗೆ ಶಾಲಾ ಮಕ್ಕಳನ್ನು ಸಾಗಿಸಲು ಬಳಸಲಾಗುತ್ತಿರುವ ಖಾಸಗಿ ವೈಟ್ ಬೋರ್ಡ್ ವಾಹನಗಳನ್ನು ವಶಪಡಿಸಿಕೊಳ್ಳುವ ಕಾರ್ಯವನ್ನು ಆರಂಭಿಸಿದೆ.

ಹಲವು ವರ್ಷಗಳಿಂದ ಶಾಲೆಗಳು ಹಾಗೂ ಪೋಷಕರು ತಮ್ಮ ಮನೆಗಳಿಂದ ಮಕ್ಕಳನ್ನು ಶಾಲೆಗೆ ಕರೆದೊಯ್ಯಲು ಮತ್ತು ಮರಳಿ ಮನೆಗೆ ತಲುಪಿಸಲು ಇಂತಹ ಖಾಸಗಿ ವಾಹನಗಳನ್ನೇ ಅವಲಂಬಿಸಿದ್ದಾರೆ. ಅನೇಕ ಪ್ರದೇಶಗಳಲ್ಲಿ ರಸ್ತೆಗಳು ತುಂಬಾ ಇಕ್ಕಟ್ಟಾಗಿರುವುದರಿಂದ ಬಸ್‌ಗಳು ಸಂಚರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಮನೆ ಬಾಗಿಲಿನಿಂದಲೇ ಮಕ್ಕಳನ್ನು ಸುರಕ್ಷಿತವಾಗಿ ಶಾಲೆಗೆ ಕರೆದೊಯ್ಯಲು ಸಣ್ಣ ವಾಹನಗಳೇ ಆಯ್ಕೆಯಾಗಿವೆ. ಆದರೆ ಇತ್ತೀಚಿನ ಆರ್.ಟಿ.ಓ ಕಾರ್ಯಾಚರಣೆಯಲ್ಲಿ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗುತ್ತಿರುವಾಗಲೇ ಹಲವಾರು ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ. ಓಮಿನಿ ವ್ಯಾನುಗಳನ್ನು ಶಾಲಾ ಕ್ಯಾಬುಗಳನ್ನಾಗಿ ಪರಿವರ್ತಿಸಲು ಇಲಾಖೆ ಹೇಳುತ್ತಿದೆ. ಕ್ಯಾಬುಗಳು 10 ವರ್ಷಕ್ಕಿಂತ ಕಡಿಮೆ ಅವಧಿ ಒಳಗಿರಬೇಕು ಮತ್ತು ಇನ್ನು ಇತರೆ ಷರತ್ತುಗಳನ್ನು ವಿಧಿಸಲಾಗಿದೆ. ಆದರೆ ಇದರಿಂದ ವ್ಯಾನುಗಳ ಮಾಲೀಕರಿಗೆ ಹೆಚ್ಚಿನ ಆರ್ಥಿಕ ಹೊರೆ ಉಂಟಾಗುತ್ತದೆ. ಈ ಆರ್ಥಿಕ ಹೊರೆಯು ಪೋಷಕರಿಗೆ ವರ್ಗಾಯಿಸುವುದರಿಂದ ಮಧ್ಯಮ ವರ್ಗದ ಪೋಷಕರ ಮಕ್ಕಳಿಗೆ ಶಿಕ್ಷಣ ದುಬಾರಿಯಾಗುತ್ತದೆ. ಇದರ ಪರಿಣಾಮವಾಗಿ ಸಾವಿರಾರು ವಿದ್ಯಾರ್ಥಿಗಳು ಮತ್ತು ಅವರ ಪೋಷಕರು ಪ್ರತಿದಿನ ಶಾಲೆಗೆ ಹೋಗುವ ಪ್ರಯಾಣವನ್ನು ಹೇಗೆ ನಿರ್ವಹಿಸಬೇಕು ಎಂಬ ಚಿಂತೆಗೊಳಗಾಗಿದ್ದಾರೆ. ಈ ವಿಷಯವು ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ನೇರವಾಗಿ ಸಂಬಂಧಿಸಿದ್ದರಿಂದ ಶಾಲೆಗಳಿಗೂ ಕೂಡ ಸಮಸ್ಯೆಯಾಗಿ ಪರಿಣಮಿಸಿದೆ.

ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯವನ್ನು ಗಮನಿಸಿ, ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಸೌಲಭ್ಯವನ್ನು ಕಾಪಾಡುವಂತೆ ಹಾಗೆಯೇ ಖಾಸಗಿ ವಾಹನ ಮಾಲೀಕರು ಮತ್ತು ಶಾಲೆಗಳಿಗೆ ಕೂಡ ಸ್ವಲ್ಪ ಪರಿಹಾರ ದೊರೆಯುವಂತೆ ಒಂದು ಸ್ನೇಹಪೂರ್ಣ ಹಾಗೂ ವ್ಯವಹಾರಿಕ ಪರಿಹಾರವನ್ನು ರೂಪಿಸುವಂತೆ ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಉತ್ತರ:**

ಶಾಲಾ ಮಕ್ಕಳ ಸುರಕ್ಷತೆ ಮತ್ತು ಭದ್ರತೆಯನ್ನು ಖಚಿತಪಡಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರವು The Karnataka Motor Vehicles (Conditions for Vehicles Engaged in Transport of School Children) Rules, 2012 ಅನ್ನು ರೂಪಿಸಿರುತ್ತದೆ. ಸದರಿ ನಿಯಮಗಳು ದಿನಾಂಕ: 01-05-2013 ರಿಂದ ಜಾರಿಗೆ ಬಂದಿರುತ್ತವೆ.

ಈ ನಿಯಮಗಳ ಅಡಿಯಲ್ಲಿ ಶಾಲಾ ಮಕ್ಕಳನ್ನು ಸಾಗಿಸುವ ವಾಹನಗಳ ಮಾಲೀಕರು ಮತ್ತು ನಿರ್ವಾಹಕರು ಪಾಲಿಸಬೇಕಾದ ಸುರಕ್ಷತಾ ಷರತ್ತುಗಳು ಹಾಗೂ ಅವಶ್ಯಕತೆಗಳನ್ನು ನಿಗದಿಪಡಿಸಲಾಗಿದೆ. ಶಾಲಾ ಮಕ್ಕಳ ಸುರಕ್ಷತೆಯನ್ನು ಖಚಿತಪಡಿಸುವುದು ಈ ನಿಯಮಗಳ ಮುಖ್ಯ ಉದ್ದೇಶವಾಗಿದೆ.

ಸಾರಿಗೆ ಇಲಾಖೆಯು ಈ ನಿಯಮಗಳು ಜಾರಿಗೆ ಬಂದ ದಿನದಿಂದಲೂ ಶಾಲಾ ವಾಹನಗಳ ಮಾಲೀಕರು ಹಾಗೂ ನಿರ್ವಾಹಕರಿಗೆ ಅನುಕೂಲವಾಗುವಂತೆ ಜಾಗೃತಿ ಕಾರ್ಯಕ್ರಮಗಳು, ಮಾರ್ಗದರ್ಶನ ಹಾಗೂ ಅಗತ್ಯ ಸಹಕಾರವನ್ನು ನೀಡುತ್ತಾ, ಸುರಕ್ಷತೆ ಮತ್ತು ವಾಹನ ಮಾಲೀಕರ ಹಿತಾಸಕ್ತಿಗಳ ನಡುವೆ ಸಮತೋಲನ ಕಾಯ್ದುಕೊಳ್ಳುವ ನಿಲುವನ್ನು ಅನುಸರಿಸುತ್ತ ಬಂದಿದೆ.

ಆದಾಗ್ಯೂ, ಶಾಲಾ ಮಕ್ಕಳನ್ನು ಸಾಗಿಸುವ ವಾಹನಗಳು ಸದರಿ ನಿಯಮಗಳನ್ನು ಉಲ್ಲಂಘಿಸಿರುವುದು ಕಂಡುಬಂದಲ್ಲಿ, ಮೋಟಾರು ವಾಹನಗಳ ಅಧಿನಿಯಮ, 1988 ಹಾಗೂ ಅದರಡಿ ರೂಪಿಸಲಾದ ನಿಯಮಗಳ ಅನ್ವಯ ದಂಡ ವಿಧಿಸುವುದು, ಇತರೆ ಕಾನೂನು ಕ್ರಮಗಳನ್ನು ಕೈಗೊಳ್ಳುವುದು ಹಾಗೂ ಅಗತ್ಯವಿದ್ದಲ್ಲಿ ವಾಹನಗಳನ್ನು ವಶಪಡಿಸಿಕೊಳ್ಳುವ ಕ್ರಮಗಳನ್ನು ಸಹ ಕೈಗೊಳ್ಳಲಾಗುತ್ತಿದೆ. ಈ ಕ್ರಮಗಳ ಉದ್ದೇಶವು ಶಾಲಾ ಮಕ್ಕಳ ಸುರಕ್ಷತೆಯನ್ನು ಕಾಪಾಡುವುದಾಗಿದೆ.

ಇದಲ್ಲದೆ, ವಾಹನ ಮಾಲೀಕರು ಎದುರಿಸುತ್ತಿದ್ದ ಪ್ರಾಯೋಗಿಕ ಸಮಸ್ಯೆಗಳನ್ನು ಪರಿಗಣಿಸಿ, ಶಾಲಾ ಮಕ್ಕಳ ಸಾರಿಗೆಯಲ್ಲಿ ನಿರತವಾಗಿರುವ ವಾಹನಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸದರಿ ನಿಯಮಕ್ಕೆ ತಿದ್ದುಪಡಿ ಮಾಡಿ ದಿನಾಂಕ: 15-06-2024 ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ. ಸದರಿ ಅಧಿಸೂಚನೆಯಲ್ಲಿ ಹೊಸದಾಗಿ 4ಎ ನಿಯಮವನ್ನು ಸೇರ್ಪಡೆಗೊಳಿಸಿದ್ದು, ಇದರಿಂದಾಗಿ ವಾಹನ ಮಾಲೀಕರು ಹಾಗೂ ಶಾಲಾ ಮಕ್ಕಳ ಪೋಷಕರಿಗೆ ಅನುಕೂಲವಾಗುತ್ತಿದೆ.

ಹೀಗಾಗಿ, ಸರ್ಕಾರ ಮತ್ತು ಸಾರಿಗೆ ಇಲಾಖೆಯು ಶಾಲಾ ಮಕ್ಕಳ ಸುರಕ್ಷತೆಯನ್ನು ಅತ್ಯುನ್ನತ ಆದ್ಯತೆಯಾಗಿ ಪರಿಗಣಿಸುವುದರ ಜೊತೆಗೆ, ವಾಹನ ಮಾಲೀಕರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಕಾಲಕಾಲಕ್ಕೆ ನಿಯಮಗಳನ್ನು ಪರಿಶೀಲಿಸಿ ಅವುಗಳಿಗೆ ಅಗತ್ಯ ತಿದ್ದುಪಡಿಗಳನ್ನು ತರುವ ಮೂಲಕ ಸಮನ್ವಯ ಸಾಧಿಸಿ ಕರ್ತವ್ಯ ನಿರ್ವಹಿಸಲಾಗುತ್ತಿದೆ.

ಟಿಡಿ 60 ಟಿಡಿಕ್ಯೂ 2026

(ಬಿ. ಎಸ್. ಸುರೇಶ)
ಸಾರಿಗೆ ಸಚಿವರು